

# ಮಾಸ್ಟರ್ ಮೊಶಾಯ್

■ ಪ್ರವೀಣ ಕುಲಕರ್ಣಿ

ಅದು 2004ರ ಒಂದು ಮುಂಜಾವು. ನಿವೃತ್ತರಾಗಿದ್ದ ಆ ಮೇಷ್ಟ್ರು ಎಂದಿನಂತೆ ಬೆಳಗಿನ ವಾಯು ವಿಹಾರಕ್ಕೆ ತೆರಳಿ ಮನೆಗೆ ವಾಪಸ್ ಆಗುತ್ತಿದ್ದರು. ಬಾಗಿಲು ತೆರೆದು ವರಾಂಡದಲ್ಲಿ ಬರುತ್ತಿದ್ದಂತೆ ಮೂವರು ಹುಡುಗಿಯರು ಅವರಿಗೆ ಎದುರಾದರು. ‘ಯಾರಮ್ಮ ನೀವು? ನನ್ನಿಂದ ಏನಾಗಬೇಕಿತ್ತು’ ಎಂದು ಮೇಷ್ಟ್ರು ಪ್ರಶ್ನಿಸಿದರು. ‘ನಾವು ಇಲ್ಲಿಂದ 23 ಕಿ.ಮೀ. ದೂರದ ಪುಟ್ಟ ಹಳ್ಳಿಯಿಂದ ಸೈಕಲ್ ಮೇಲೆ ಬಂದಿದ್ದೇವೆ. ನಮಗೆ ನೀವು ಪಾಠ ಮಾಡಿ ಎಂದು ಕೇಳಿಕೊಳ್ಳುತ್ತಿದ್ದೇವೆ’ ಎಂದು ಆ ಹುಡುಗಿಯರು ಕೈಮುಗಿದು ಉತ್ತರ ನೀಡಿದರು. ಅವರ ಓದಿನ ಹಸಿವು ಕಂಡು ಮೇಷ್ಟ್ರ ಹೃದಯ ತುಂಬಿಬಂತು. ‘ನಾನು ಪಾಠ ಮಾಡಲು ಸಿದ್ಧನಿರುವೆ. ನೀವು ಶುಲ್ಕ ಭರಿಸಬೇಕಲ್ಲ? ಅದಕ್ಕೆ ನೀವು ಸಿದ್ಧರಿದ್ದೀರಾ’ ಎಂದು ಮರುಪ್ರಶ್ನೆ ಹಾಕಿದರು. ‘ನಾವು ಎಷ್ಟು ದುಡ್ಡು ಕೊಡಬೇಕು...’ ಹುಡುಗಿಯರು ಕಣ್ಣರಳಿಸಿ ಕೇಳಿದರು. ‘ನನ್ನ ಶುಲ್ಕ ವರ್ಷಕ್ಕೆ ಒಂದು ರೂಪಾಯಿ’ ಎಂದು ಮೇಷ್ಟ್ರು ಹೇಳಿದಾಗ, ಉತ್ಸಾಹದ ಬುಗ್ಗೆಯಾದ ಆ ಹುಡುಗಿಯರು ಒಂದು ರೂಪಾಯಿ ಶುಲ್ಕದ ಜತೆಗೆ ಚಾಕೊಲೇಟ್‌ಗಳನ್ನೂ ತಂದುಕೊಟ್ಟರು.

ಪಶ್ಚಿಮ ಬಂಗಾಳದ ಆಸಗ್ರಾಮದ ಮಾಸ್ಟರ್ ಮೊಶಾಯ್ (ಮಹಾಶಯ!) ಸುಜಿತ್ ಚಟ್ಟೋಪಾಧ್ಯಾಯ ಅವರು 20 ವರ್ಷಗಳ ಹಿಂದೆ ಆರಂಭಿಸಿದ ಸಾದಾಯ್ ಫಕೀರ್ ಪಾಠಶಾಲಾ ಶುರುವಾದ ಬಗೆ ಇದು. ಮಾಸ್ಟರ್ ಮೊಶಾಯ್ ಅವರು, ಆರು ದಶಕಗಳ ಹಿಂದೆ ಸ್ನಾತಕೋತ್ತರ ಪದವಿ ಪೂರೈಸಿ, ಹೊರಬಂದಾಗ ದೊಡ್ಡ ದೊಡ್ಡ ಪಟ್ಟಣಗಳ ಹಲವು ಶಾಲೆಗಳು ಅವರ ಸೇವೆಯನ್ನು ಪಡೆಯಲು ಮುಂದೆ ಬಂದಿದ್ದವು. ಆದರೆ, ಆ ಅವಕಾಶಗಳನ್ನು ನಯವಾಗಿ ತಿರಸ್ಕರಿಸಿದ ಅವರು, ತಮ್ಮ ಹಳ್ಳಿಗೆ ಬಂದು, ರಾಮನಗರ ಉಚ್ಚ ಮಾಧ್ಯಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಸೇರಿಕೊಂಡರು. 39 ವರ್ಷಗಳವರೆಗೆ ಸೇವೆ ಸಲ್ಲಿಸಿ, ಮುಖ್ಯೋಪಾಧ್ಯಾಯರಾಗಿ ನಿವೃತ್ತರಾದರು.

‘ನಿವೃತ್ತನಾದ ಬಳಿಕ ಚಹಾ ಕುಡಿಯುವುದು, ಹೊರಸಿನಮೇಲೆ ಕಾಲು ಚಾಚಿಕುಳಿತುಕೊಳ್ಳುವುದು ಇಷ್ಟೇ ನನ್ನ ಕೆಲಸವಾಗಿತ್ತು. ಆ ಮಕ್ಕಳು ಪಾಠ ಮಾಡಲು ಕೇಳಿ ನನಗೆ ಉಪಕಾರ ಮಾಡಿದರು’ ಎಂದು ಚಟ್ಟೋಪಾಧ್ಯಾಯರು ವಿನೀತರಾಗಿ ಹೇಳುತ್ತಾರೆ. ಮೂರು ವಿದ್ಯಾರ್ಥಿನಿಯರಿಂದ ಶುರುವಾದ ಈ ಪಾಠಶಾಲೆಯಲ್ಲಿ ಈಗ 350 ಮಕ್ಕಳು ಕಲಿಯುತ್ತಿದ್ದಾರೆ. ಶಾಲೆಯಲ್ಲಿ ಒಂದು ಕೊಠಡಿಯಲ್ಲಿ ಪಾಠ ಮಾಡಲು ಬಿಟ್ಟುಕೊಡಬಹುದೇ ಎಂದು ಶಾಲಾ ವ್ಯವಸ್ಥಾಪಕರನ್ನು ಮೇಷ್ಟ್ರು ಕೇಳಿದರು. ಆದರೆ, ಅವರು ಒಪ್ಪಲಿಲ್ಲ. ಯಾರನ್ನೂ ದೂರದೆ ಸೀದಾ ಮನೆಗೆ ಬಂದ ಅವರು, ಮನೆಯ ವರಾಂಡವನ್ನೇ ಶುಚಿಗೊಳಿಸಿ, ಮಕ್ಕಳಿಗೆ ಇದೇ ನಿಮ್ಮ ಶಾಲಾ ಕೊಠಡಿ ಎಂದು ಹೇಳಿದರು. ಆ ಜಾಗದಲ್ಲೇ ಕುಳಿತು ಮಕ್ಕಳು ಪಾಠ ಕಲಿಯತೊಡಗಿದರು. ಮಾಸ್ಟರ್ ಮೊಶಾಯ್ ಅವರ ಊರಿನ ಸುತ್ತಲೂ ಹೆಚ್ಚಾಗಿ ಬುಡಕಟ್ಟು ಸಮುದಾಯಗಳ ಹಾಡಿಗಳಿವೆ. ಅಲ್ಲಿನ ಮಕ್ಕಳಿಗೆಲ್ಲ ಸಾದಾಯ್ ಫಕೀರ್ ಪಾಠಶಾಲೆಯೇ ವಿದ್ಯೆಗೆ ಆಸರೆಯಾಗಿದೆ. ಇದುವರೆಗೆ ಈ ಶಾಲೆಯಲ್ಲಿ ಮೂರು ಸಾವಿರಕ್ಕೂ ಅಧಿಕ ಹೆಣ್ಣುಮಕ್ಕಳು ವಿದ್ಯಾಭ್ಯಾಸ ಕಲಿತಿದ್ದಾರೆ. ಸುತ್ತಲಿನ 20 ಕಿ.ಮೀ. ಸರಹದ್ದಿನ ಹಾಡಿಗಳಿಂದ ಮಕ್ಕಳು ಈ ಶಾಲೆಗೆ ಬರುತ್ತಾರೆ. ‘ನಾನು ಅವರಿಗೆ ಕಲಿಸುವುದು ಅಷ್ಟೋ, ಇಷ್ಟು. ಆ ಮಕ್ಕಳಿಂದಲೇ ಕಲಿಯುವುದು ಬೆಟ್ಟದಷ್ಟಿದೆ’ ಎಂದು ಮೇಷ್ಟ್ರು ಹೇಳುತ್ತಾರೆ.

ಸಾದಾಯ್ ಫಕೀರ್ ಪಾಠಶಾಲೆಯಲ್ಲಿ ಕಲಿತವರಲ್ಲಿ ಹಲವರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದಾರೆ. ತಮಗೆ ಕಲಿಸಿದ ಮೇಷ್ಟ್ರ ರೀತಿಯಲ್ಲೇ ನಿಸ್ವಾರ್ಥ ಭಾವದ ಶಿಕ್ಷಕರಾಗಿದ್ದಾರೆ. ಸಮುದಾಯದ ಪರಿವರ್ತನೆಯಲ್ಲಿ ತೊಡಗಿದ ಸ್ವಯಂಸೇವಕರಿದ್ದಾರೆ. ಸಂಶೋಧನಾ ವಲಯದಲ್ಲಿ ತೊಡಗಿಸಿಕೊಂಡವರೂ ಇದ್ದಾರೆ. ಒಬ್ಬೊಬ್ಬ ವಿದ್ಯಾರ್ಥಿಯ ಯಶೋಗಾಥೆ ಕೇಳಿದಾಗಲೂ ಮೇಷ್ಟ್ರ ಕಣ್ಣಿನಿಂದ ಹರ್ಷಧಾರೆ ಉಕ್ಕುತ್ತದೆ. 3–4 ವರ್ಷಗಳ ಹಿಂದೆ ಚಟ್ಟೋಪಾಧ್ಯಾಯರಿಗೆ ಪದ್ಮಶ್ರೀ ಪ್ರಶಸ್ತಿ ಒಲಿದು ಬಂತು. ಆಗ ಅವರ ವಿದ್ಯಾರ್ಥಿಗಳೆಲ್ಲ ಚಾಕೊಲೇಟ್ ತಂದು, ಮೇಷ್ಟ್ರಿಗೆ ಅಭಿನಂದಿಸಿದರು!

ಈ ಶಾಲೆ ನಡೆಯುವುದು ಬೆಳಗಿನಿಂದ ಬೈಗಿನವರೆಗೆ. ಅಂದರೆ ಬೆಳಿಗ್ಗೆ 6ಕ್ಕೆ ಆರಂಭವಾಗುವ ಈ ಶಾಲೆ ಸಂಜೆ 6ರವರೆಗೆ ನಡೆಯುತ್ತದೆ. ಪದವಿ ಅಧ್ಯಯನ ಮಾಡುವ ನೂರಾರು ವಿದ್ಯಾರ್ಥಿಗಳು ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಾರೆ. ಮೇಷ್ಟ್ರು ನಿತ್ಯದ ಹಾಜರಿಯನ್ನು ನಿರ್ವಹಣೆ ಮಾಡುತ್ತಾರೆ. ಯಾವುದೇ ವಿದ್ಯಾರ್ಥಿ ಎರಡು ದಿನಕ್ಕಿಂತ ಹೆಚ್ಚು ಗೈರು ಹಾಜರಾದರೆ ಅವರ ಪಾಲಕರಿಗೆ ಬುಲಾವ್ ಹೋಗುತ್ತದೆ. ಆಗಾಗ ಪಾಲಕರ ಸಭೆ ನಡೆಸಿ ಅವರ ಸುಖ–ದುಃಖವನ್ನೂ ಕೇಳುತ್ತಾರೆ. ಮಾಸ್ಟರ್ ಮೊಶಾಯ್ ಅವರಿಗೆ ತಮ್ಮ ಮನೆಯ ವರಾಂಡದಲ್ಲಿ ಭರ್ತಿ ತುಂಬಿದ ಮಕ್ಕಳನ್ನು ಕಂಡಾಗ ಇನ್ನಷ್ಟು ಹುಮ್ಮಸ್ಸು ಬರುತ್ತದೆ. ಆಗ ಅವರ ಪಾಠ ಮಾಡುವ ಉತ್ಸಾಹ ಇಮ್ಮಡಿಗೊಳ್ಳುತ್ತದೆ. 80ರ ಈ ಇಳಿವಯಸ್ಸಿನಲ್ಲಿಯೂ ಶಿಕ್ಷಣದ ಕುರಿತ ಅವರ ಕಾಳಜಿ ಅನನ್ಯವಾಗಿದೆ. ನಿಮ್ಮ ಜೀವನದ ಹಿರಿದಾಸೆ ಏನೆಂದು ಅವರನ್ನು ಕೇಳಿದರೆ, ಕೊನೆಯ ಉಸಿರು ಇರುವವರೆಗೆ ನಾನು ಪಾಠ ಮಾಡಬೇಕು, ಪಾಠ ಮಾಡುತ್ತಲೇ ಕಣ್ಮುಚ್ಚಬೇಕು. ಇದೊಂದು ಆಸೆ ಹೊರತುಪಡಿಸಿದರೆ ಬೇರೆ ನನಗೆ ಯಾವ ಆಕಾಂಕ್ಷೆಯೂ ಇಲ್ಲ ಎಂದು ಅವರು ಹೇಳುತ್ತಾರೆ!

ಚಿತ್ರಕೃಪೆ: X

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65